# ಕರುಣಾಮೂರ್ತಿ ರಾಜ ರಂತಿದೇವ

**ಡಾ. ವಾಗೀಶ್ವರೀ ಶಿವರಾಮ**

ಭಾಗವತ ಗ್ರಂಥವು ಭಗವದ್ಭಕ್ತಿಯನ್ನು ಹೊಮ್ಮಿಸುವ ಅನೇಕ ಕಥೆಗಳ ಒಂದು ಆಗರವಾಗಿದೆ. ಇದರಲ್ಲಿ ಬರುವ ರಂತಿದೇವನ ಕಥೆ ಒಬ್ಬ ವ್ಯಕ್ತಿಯಲ್ಲಿ ಉಂಟಾಗುವ ಅಂತರಂಗದ ಪರಿವರ್ತನೆಗೆ ಅತ್ಯದ್ಭುತವಾದ ಒಂದು ನಿದರ್ಶನವಾಗಿದೆ. ಇದನ್ನು ಕನ್ನಡದಲ್ಲಿ ಸುಲಭ ಶೈಲಿಯಲ್ಲಿ ಸುಂದರವಾಗಿ ನಿರೂಪಿಸಿಕೊಟ್ಟಿರುವ ಲೇಖಕರು ಮಂಗಳೂರಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು; ಅವರು ಕನ್ನಡದಲ್ಲಿ ಮೂವತ್ತಕ್ಕೂ ಹೆಚ್ಚು ಬೋಧಪ್ರದವಾದ, ವಿದ್ಯಾರ್ಥಿಗಳಿಗೆ ನೈತಿಕ ಆದರ್ಶವನ್ನು ನೀಡಬಲ್ಲ ಗ್ರಂಥಗಳನ್ನು ರಚಿಸಿದ್ದಾರೆ. ಅವರು ರಚಿಸಿದ '**ಶ್ರೀಮದ್ ಭಾಗವತಸಂದೇಶ-ಕಥಾಮಾಲಾ**' ಗ್ರಂಥದಿಂದ ಈ ಕಥೆಯನ್ನು ಆರಿಸಲಾಗಿದೆ.



### ಭಗವಂತನ ಕೃಪೆಗೆ; ಕರುಣೆ, ಮೈತ್ರಿಗುಣಗಳು ಬೇಕು

ಯಯಾತಿಯ ಮಗ ಪೂರುವಿನ ವಂಶದಲ್ಲಿ ಅನೇಕ ರಾಜ ಋಷಿಗಳೂ, ಬ್ರಹ್ಮ ಋಷಿಗಳೂ ಹುಟ್ಟಿ ಪ್ರಖ್ಯಾತರಾದರು. ಇವರಲ್ಲಿ **ದುಷ್ಯಂತ ಚಕ್ರವರ್ತಿ** ಮಹಾಶಕ್ತಿಶಾಲಿಯಾಗಿದ್ದ. ದುಷ್ಯಂತ-ಶಕುಂತಲೆಯರ ಪುತ್ರನೇ ಭರತ. ಭರತನ ದತ್ತು ಪುತ್ರನೇ ಭರದ್ವಾಜ. ಭರದ್ವಾಜನ ಪೀಳಿಗೆಯಲ್ಲಿ ಹುಟ್ಟಿದವನೇ **ಸಂಕೃತಿ.** ಸಂಕೃತಿಯ ಮಗನೇ ರಂತಿದೇವ.

**ರಾಜ ರಂತಿದೇವ** ಕೊಡುಗೈ ದಾನಿಯಾಗಿದ್ದ. ದಾನ ಕೊಟ್ಟು ಕೊಟ್ಟು ದರಿದ್ರನಾದ. ದಾನ ಸ್ವೀಕರಿಸಿದವರೆಲ್ಲ ಶ್ರೀಮಂತ ರಾದರು. ದಾನ ಕೊಡಲು ಏನೂ ಉಳಿಯದಿದ್ದಾಗ, ರಾಜ ಮಡದಿ-ಮಕ್ಕಳೊಡನೆ ಕಾಡಿಗೆ ಹೊರಟ. ಕಾಡಿನಲ್ಲಿ ದೊರೆಯುವ ಗೆಡ್ಡೆ-ಗೆಣಸುಗಳಿಂದಲೇ ಜೀವನ ಕಳೆಯಲಾರಂಭಿಸಿದ. ಅನೇಕ ದಿನಗಳು ಇದೇ ರೀತಿ ಕಳೆದವು. ಒಂದು ಬಾರಿ ರಂತಿ ದೇವನ ಪರಿವಾರಕ್ಕೆ ಏನೂ ಆಹಾರ ಸಿಗಲೇ ಇಲ್ಲ. ಹೀಗೆ ಅವರು ೪೮ ದಿನಗಳವರೆಗೆ ಒಂದು ಹನಿ ನೀರೂ ಸಿಗದೆ ದಿನಗಳನ್ನು ಕಳೆದರು. ೪೯ನೇ ದಿನ ಬೆಳಗ್ಗೆ ರಾಜನಿಗೆ ಸ್ವಲ್ಪ ತುಪ್ಪ, ಪಾಯಸ, ಗೋಧಿಯ ಅನ್ನ ಮತ್ತು ನೀರು ದೊರೆತವು.

ರಾಜ, ಹಸಿದಿದ್ದ ಪರಿವಾರದೊಂದಿಗೆ ಭೋಜನಕ್ಕೆ ಕುಳಿತ. ಆಗ ಒಬ್ಬ ಬ್ರಾಹ್ಮಣನು ಅತಿಥಿಯಾಗಿ ಬಂದ. ರಂತಿದೇವನು; ದೇವರೇ ಈ **ಬ್ರಾಹ್ಮಣ**ನ ರೂಪದಲ್ಲಿ ಬಂದಿದ್ದಾನೆಂದು ಭಾವಿಸುತ್ತ, ತನ್ನ ಪಾಲಿನ ಎಲ್ಲಾ ಊಟವನ್ನೂ ಆ ಬ್ರಾಹ್ಮಣನಿಗೇ ನೀಡಿದ. ಬ್ರಾಹ್ಮಣನು ಊಟ ಮಾಡಿ ತೆರಳಿದ. ಉಳಿದುದನ್ನು

ಹಂಚಿಕೊಂಡು ಊಟ ಮಾಡಲು ಕುಳಿತಾಗ, ಇನ್ನೊಬ್ಬ **ಶೂದ್ರ**ನು ಅತಿಥಿಯಾಗಿ ಬಂದನು. ರಂತಿದೇವನು ಅವನಲ್ಲಿಯೂ ಭಗವಂತನನ್ನೇ ಕಾಣುತ್ತ, ಸ್ವಲ್ಪ ಭಾಗ ಆಹಾರವನ್ನು ಅವನಿಗೂ ಉಣಬಡಿಸಿದ. ಶೂದ್ರನೂ ಹೊರಟುಹೋದ ಮೇಲೆ ನಾಯಿಗಳೊಂದಿಗೆ ಒಬ್ಬ ಬೇಡನು ಅತಿಥಿಯಾಗಿ ಬಂದನು. ರಂತಿದೇವನು ಆದರದಿಂದ ಉಳಿದ ಆಹಾರವನ್ನೆಲ್ಲ ಅವನಿಗೆ ಕೊಟ್ಟು, ಭಗವಂತನೇ ಈ ರೂಪದಲ್ಲಿ ಬಂದಿದ್ದಾನೆಂದು ಭಾವಿಸುತ್ತ, ನಮಸ್ಕರಿಸಿದನು. ಈಗ ಒಬ್ಬನಿಗೆ ಮಾತ್ರ ಕುಡಿಯಲು ಸಾಕಾಗುವಷ್ಟು ನೀರು ಮಾತ್ರ ಉಳಿದಿತ್ತು. ಅದನ್ನು ತಮ್ಮಲ್ಲಿ ಹಂಚಿಕೊಂಡು ಕುಡಿಯಬೇಕೆಂದಿರುವಾಗ ಒಬ್ಬ ಚಾಂಡಾಲನು ಬಂದು–''ಮಹಾಸ್ವಾಮಿ! ನಾನೊಬ್ಬ ಚಾಂಡಾಲ. ಬಾಯಾರಿಕೆಯಿಂದ ನನ್ನ ಪ್ರಾಣ ಹೋಗುತ್ತಿದೆ. ನನಗೆ ಸ್ವಲ್ಪ ನೀರು ಕುಡಿಯಲು ಕೊಡಿ'' ಎಂದು ಕೇಳಿದ. ರಾಜನ ಹೃದಯ ಕರಗಿತು. ಕಣ್ಣುಗಳು ಒದ್ದೆ ಆದವು. ತುಂಬಾ ಪ್ರೀತಿಯಿಂದ ಆತನಿಗೆ ಉಳಿದಿದ್ದ ನೀರನ್ನೆಲ್ಲ ನೀಡಿದ. ಕೃತಾರ್ಥನಾದೆ ಎಂದುಕೊಂಡ.

ಚಾಂಡಾಲ ಹೊರಟುಹೋದ ಕೂಡಲೇ, ರಂತಿದೇವ ಹಸಿವು, ಬಾಯಾರಿಕೆಯಿಂದ ಮೂರ್ಛಿತನಾಗಿ ಕೆಳಗೆ ಬಿದ್ದ. ಆವಾಗ ಅಲ್ಲಿ ಭಗವಂತನು, **ಬ್ರಹ್ಮ**, **ವಿಷ್ಣು**, **ಮಹೇಶ್ವರ**ರ ರೂಪದಲ್ಲಿ ಕಾಣಿಸಿಕೊಂಡನು. ರಂತಿದೇವ ಅವರ ಪಾದಗಳಿಗೆ ನಮಸ್ಕರಿಸಿದನು. ಬ್ರಹ್ಮದೇವನು–''ರಂತಿದೇವ! ನಾವೇ ಬೇರೆ ಬೇರೆ ರೂಪದ ಅತಿಥಿಗಳಾಗಿ ನಿನ್ನ ಬಳಿಗೆ ಬೇಡಲು ಬಂದಿದ್ದೆವು. ನಿನ್ನ ಕರುಣಾಹೃದಯವನ್ನು ಕಂಡು ಮೆಚ್ಚಿದ್ದೇವೆ. ಬೇಕಾದ ವರ ಕೇಳು'' ಎಂದು ಆಗ ರಂತಿದೇವನು –''**ದೇವಾ! ದುಃಖದಿಂದ ಬಳಲುತ್ತಿರುವ ಎಲ್ಲ ಜೀವಿಗಳು ಕಷ್ಟ, ತೊಂದರೆಗಳಿಲ್ಲದೇ ಬದುಕಲಿ**'' ಎಂಬುದೇ ನನ್ನಾಸೆ'', ಎಂದನು. ತ್ರಿಮೂರ್ತಿಗಳ ಸ್ವರೂಪದಲ್ಲಿದ್ದ ಭಗವಂತನು, ರಂತಿದೇವನನ್ನು ಮಾಯೆಯಿಂದ ಬಿಡುಗಡೆಗೊಳಿಸಿದನು. ರಂತಿದೇವನೂ ಅತಿಥಿಗಳ ಸೇವಾ ರೂಪದ ಕರ್ಮಮಾರ್ಗದಿಂದಲೇ ಆತ್ಮಸಾಕ್ಷಾತ್ಕಾರವನ್ನು ಪಡೆ ದನು.

ಹೀಗೆ **ಚಂದ್ರವಂಶ**ದವರ (ಪರೀಕ್ಷಿತನ ಪೂರ್ವಜರ) ಹಿರಿಮೆ–ಗರಿಮೆಗಳನ್ನು ತಿಳಿಸುವ ಕಥೆಗಳನ್ನು ತಿಳಿಸಿದ **ಶುಕರು**, ದಶಮ ಸ್ಕಂಧದಲ್ಲಿ **ಯದುವಂಶ**ದ ರಾಜರಾದ **ಆಹುಕ**, **ದೇವಕ**, **ವಸುದೇವ** (ಶ್ರೀಕೃಷ್ಣ ತಂದೆ) ಇವರುಗಳ ಬಗ್ಗೆ ತಿಳಿಸುತ್ತಾರೆ. **ಕೃಷ್ಣ**, ಯದುಕುಲದ ತಿಲಕ. ಭಗವಂತನ ಪೂರ್ಣಾವತಾರ. (ಕೃಷ್ಣಸ್ತು ಭಗವಾನ್ ಸ್ವಯಮ್). ಕೃಷ್ಣ ಲೀಲೆಗಳ ಕಥಾಶ್ರವಣ(ದಶಮ ಸ್ಕಂದಪೂರ್ತಿ) ಎಲ್ಲರನ್ನೂ ಪವಿತ್ರಗೊಳಿಸುತ್ತದೆ'' ಎಂದು ಹೇಳಿದರು.

*(ಭಾಗವತ, ಒಂಬತ್ತನೆಯ ಸ್ಕಂಧದಲ್ಲಿ ಬರುವ ಕಥೆಯ ಸಾರವಿದು)*

ಒಂಬತ್ತನೆಯ ಸ್ಕಂಧದಲ್ಲಿ ಬರುವ ಸೂರ್ಯವಂಶದ ರತ್ನಪ್ರಾಯರಾದ **ಪೃಷಧ್ರ**(ವಿಮರ್ಷಿಸಿ ಕೆಲಸ ಮಾಡು), **ಸುಕನ್ಯಾ** (ತನ್ನ ತಪ್ಪು ತಿಳಿಯುವುದು), **ನಾಭಾಗ,** (ಸತ್ಯನಿಷ್ಠೆ, ಧರ್ಮದ ನಿಷ್ಠೆ), **ಅಂಬರೀಷ** (ಭಗವದ್‌ಭಕ್ತಿ). **ಸೌಭರೀ ಮಹರ್ಷಿ** (ಸಹವಾಸ ದೋಷ), **ಭಗೀರಥ** (ಪ್ರಯತ್ನಶೀಲತೆ), **ಚಂದ್ರವಂಶ**ದ ರತ್ನಗಳಾದ **ಪರಶುರಾಮ** (ಮಾತಾಪಿತೃ ಭಕ್ತಿ), **ಯಯಾತಿ** (ಇಂದ್ರಿಯ ನಿಗ್ರಹ), **ರಂತಿದೇವ** (ಸೇವಾಧರ್ಮ), ಇವರ ಕಥೆಗಳಲ್ಲಿ ಇರುವ ಸಂದೇಶದ ಆದರ್ಶಗಳಿಂದ ಆತ್ಮಶಕ್ತಿ ಜಾಗೃತವಾಗುತ್ತದೆ. ಈ ಎಲ್ಲಾ ಮಹಾತ್ಮರ ಆದರ್ಶಗಳನ್ನು ಹಾಗೂ ವಂಶದ ಹಿರಿಯರ ಸಾಧನೆಗಳನ್ನು ಸ್ಮರಿಸಿಕೊಂಡಾಗ, ಉತ್ಸಾಹದಿಂದ ಸಾಧನಾಪಥದಲ್ಲಿ ಸಾಗುತ್ತ ಭಗವಂತನ ಕೃಪೆಗೆ ಪಾತ್ರರಾಗಬಹುದು. ನವಮ ಸ್ಕಂಧದಲ್ಲಿ ಸೂರ್ಯವಂಶ, ಚಂದ್ರವಂಶದ ರಾಜರ ಕಥೆಗಳೇ ಪ್ರಧಾನವಾಗಿ ಇರುವುದರಿಂದ, ಈ ಸ್ಕಂಧವು '**ವಂಶಾನುಚರಿತ ಸ್ಕಂಧ**'ಎನಿಸಿದೆ.

* * * *

ರಂತಿದೇವನು ಬ್ರಹ್ಮದೇವನ ಬಳಿ ಬೇಡಿಕೊಂಡ ವರ:

**ನ ತ್ವಹಂ ಕಾಮಯೇ ರಾಜ್ಯಂ**
**ನ ಚ ಸ್ವರ್ಗಂ ನಾಪುನರ್ಭವಮ್ ।**
**ಕಾಮಯೇ ದುಃಖತಪ್ತಾನಾಂ**
**ಪ್ರಾಣಿನಾಂ ಆರ್ತಿನಾಶನಮ್ ॥**

''ನನಗೆ ರಾಜ್ಯ, ಸ್ವರ್ಗ ಅಥವಾ ಮೋಕ್ಷ ಯಾವುದೂ ಬೇಡ, ದುಃಖದಿಂದ ಬಳಲುತ್ತಿರುವ ಎಲ್ಲಾ ಜೀವಗಳು ಕಷ್ಟ, ತೊಂದರೆಗಳಿಲ್ಲದೇ ಬದುಕಲಿ ಎಂಬುದೇ ನನ್ನ ಆಸೆ''.

## ಭಗವಂತನ ಸೇವೆ

ಭಗವಂತನಿಗೆ ಸೇವೆ ಮಾಡುವ ಒಂದು ಅವಕಾಶ ದೊರಕಿದುದರಿಂದ ಧನ್ಯರು ನಾವು. ಅವನಿಗೆ ನಾವು ಸಹಾಯ ಮಾಡಲಾರೆವು. ಸಹಾಯ ಎಂಬ ಪದವನ್ನು ನಿಮ್ಮ ಮನಸ್ಸಿನಿಂದ ನಿರ್ಮೂಲ ಮಾಡಿ. ನೀವು ಸಹಾಯ ಮಾಡಲಾರಿರಿ. ಇದು ಈಶ್ವರನಿಂದೆ. ಅವನ ಇಚ್ಛೆಯಂತೆ ನೀವು ಇಲ್ಲಿರುವಿರಿ. ಅವನಿಗೆ ನೀವು ಸಹಾಯ ಮಾಡುವಿರಿ ಎಂದು ಭಾವಿಸಿರುವಿರೇನು? ಅವನನ್ನು ನೀವು ಪೂಜಿಸಬಲ್ಲಿರಿ ಅಷ್ಟೆ. ನೀವು ನಾಯಿಗೊಂದು ತುತ್ತು ಅನ್ನವನ್ನು ಕೊಟ್ಟರೆ ನೀವು ನಾಯಿಯನ್ನು ದೇವರೆಂದು ಪೂಜಿಸುತ್ತಿದ್ದೀರಿ ಎಂದೇ ಅರ್ಥ. ಕಾರಣ ಆ ನಾಯಿಯಲ್ಲಿರುವವನು ದೇವರೇ. ಅವನೇ ಸರ್ವಸ್ವವೂ ಆಗಿದ್ದಾನೆ.

**— ಸ್ವಾಮಿ ವಿವೇಕಾನಂದ**

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೭, ಪು.೩೦೪)*